**ದಿನಾಂಕ: 06.08.2022 ರಂದು ವಾರ್ಡ್ ಸಂಖ್ಯೆ: 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ವಾರ್ಡ್ ಕಮಿಟಿ ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರ.ಸಂ | ಹೆಸರು | ಪದನಾಮ/ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಡಿ.ಸುಂದರಯ್ಯ | ನೋಡಲ್ ಅಧಿಕಾರಿಗಳು | ಹಾಜರು |
| 2. | ಶ್ರೀ. ಕೆ.ವಿ. ವೆಂಕಟರಮಣ | ಸಹಾಯಕ ಅಭಿಯಂತರರು ವಾರ್ಡ್ ನಂ.184 | ಹಾಜರು |
| 3. | ಶ್ರೀಮತಿ ಚೇತನಾ ನಾಯಕ್ | ಸಬ್ ಇನ್ಸ್‌ಪೆಕ್ಟರ್ ಸಂಚಾರಿ ಪೋಲೀಸ್ ಠಾಣೆ, ಕುಮಾರಸ್ವಾಮಿ ಬಡಾವಣೆ | ಹಾಜರು |
| 4. | ಶ್ರೀ ವೆಂಕಟೇಶ್.ಕೆ | ಘನತ್ಯಾಜ್ಯ ನಿರ್ವಹಣೆ ಇಲಾಖೆ | ಹಾಜರು |
| 5. | ಶ್ರೀ ಮುನಿರಾಜು | ಬೀದಿ ದೀಪ ನಿರ್ವಹಣೆ | ಹಾಜರು |
| 6. | ಶ್ರೀ ಸಿದ್ದರಾಜು | ಬೀದಿ ದೀಪ ನಿರ್ವಹಣೆ | ಹಾಜರು |

## ವಾರ್ಡ್ ಸಮಿತಿ ಸಭೆಗೆ ಹಾಜರಾದ ಸಮಿತಿ ಸದಸ್ಯರು

1. ಶ್ರೀ. ಎಸ್.ಕೆ.ಸುಧೀಂದ್ರ– ಪೂರ್ಣಪ್ರಜ್ಞಾ ಬಡಾವಣೆಯ RWA
2. ಶ್ರೀ ಶ್ರೀನಾಥ್– ಪೂರ್ಣಪ್ರಜ್ಞಾ ಬಡಾವಣೆಯ RWA
3. ಶ್ರೀ ಅಮರ್.ಎಂ.ಆರ್– ಎ.ಜಿ.ಎಸ್ ಬಡಾವಣೆ RWA
4. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಪರಿಚಯದೊಂದಿಗೆ ವಿವರಿಸುತ್ತಾ ಸದರಿ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು/ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

ಮು.ತಿ.ನೋ

Scanned with CamScanner

**1. ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಪೂರ್ಣಪ್ರಜ್ಞಾ ಬಡಾವಣೆಯ ಪಾರ್ಕ್ ನಂ.5 ರಲ್ಲಿರುವ ಒಳಚರಂಡಿ ಪೈಪ್‌ಲೈನ್ ಹಾಳಾಗಿ ಕೊಳಚೆ ನೀರು ಪಾರ್ಕಿನಲ್ಲಿ ಹರಿಯುತ್ತಿದ್ದು ಈ ಕೂಡಲೇ ಸರಿಪಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆ ರವರಿಗೆ ಸೂಚಿಸಿರುತ್ತಾರೆ

**2. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯಲ್ಲಿರುವ ರಸೆಗಳಲ್ಲಿ ಮರದ ಕೊಂಬೆಗಳು ಮುರಿದು ಬಿದ್ದಿದ್ದು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅರಣ್ಯ_ಇಲಾಖೆ ರವರಿಗೆ ಸೂಚಿಸಿರುತ್ತಾರೆ.

**3. ಸಂಚಾರಿ ಪೋಲೀಸ್ ಇಲಾಖೆಗೆ ಸಂಬಂಧಿಸಿದಂತೆ**

- ಪೂರ್ಣಪ್ರಜ್ಞಾ ಬಡಾವಣೆಯ RWA ಸದಸ್ಯರು ಬಡಾವಣೆಯ ರಸ್ತೆಯ ಜಂಕ್ಷನ್ ಗಳಲ್ಲಿ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಆರಕ್ಷಕ ನಿರೀಕ್ಷಕರು, ಸಂಚಾರಿ ಪೋಲೀಸ್ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

**6. ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯಲ್ಲಿರುವ ವಿದ್ಯುತ್ ಕಂಬಗಳಿಗೆ ಹೊಂದಿಕೊಂಡಿರುವ ಮರದ ರೆಂಬೆಗಳನ್ನು ಕತ್ತರಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯ/ಕಡಿತ ಹೆಚ್ಚಾಗಿದ್ದು ಈಕೂಡಲೇ ಪರಿಹರಿಸಲು ಕೋರಿರುತ್ತಾರೆ.
- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಕೇಬಲ್ ಬಂಚಿಂಗ್ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.



Scanned with CamScanner

7. **ಬೀದಿ ದೀಪ ನಿರ್ವಹಣೆ ಇಲಾಖೆಗೆ ಸಂಬಂಧಪಟ್ಟಂತೆ.**

- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಅಳವಡಿಸಿರುವ ಕಂಬಗಳಲ್ಲಿ ಟೈಮರ್ ಹಾಳಾಗಿದ್ದು ಸರಿಪಡಿಸಲು ಕೋರಿರುತ್ತಾರೆ.
- RWA ಸದಸ್ಯರು ಎಲ್.ಇ.ಡಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.
- ಎ.ಜಿ.ಎಸ ಬಡಾವಣೆಯಲ್ಲಿರುವ ಪಾರ್ಕಿನಲ್ಲಿ ವಿದ್ಯುತ್ ಕಂಬಗಳ ಬಲ್ಬ್‌ಗಳು ಹಾಳಾಗಿದ್ದು, ಈ ಕೂಡಲೇ ಹೊಸ ಬಲ್ಬ್ ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ಸಂಬಂಧಪಟ್ಟ ಬೀದಿ ದೀಪ ನಿರ್ವಹಣೆ ಇಲಾಖೆ ರವರಿಗೆ ಸೂಚಿಸಿರುತ್ತಾರೆ

8. **ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯಲ್ಲಿರುವ ಸ್ಕ್ರಾಪ್ ಅಂಗಡಿಯಿಂದ ಹೆಚ್ಚಾಗಿ ಶಬ್ದ ಮಾಲಿನ್ಯ ಉಂಟಾಗುತ್ತಿದ್ದು ಈ ಕೂಡಲೇ ನೋಟೀಸ್ ನೀಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ಸಂಬಂಧಪಟ್ಟ ಆರೋಗ್ಯ ಇಲಾಖೆ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಆಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ-184

Scanned with CamScanner